# India-EU Leaders’ Meeting (May 08, 2021)

May 06, 2021

---

## ಭಾರತ– ಯೂರೋಪಿಯನ್ ಯೂನಿಯನ್ ನಾಯಕರ ಸಭೆ (08 ಮೇ 2021)

ಮೇ 06, 2021

1. ಯೂರೋಪಿಯನ್ ಕೌನ್ಸಿಲ್ ಅಧ್ಯಕ್ಷ ಶ್ರೀ ಚಾರ್ಲ್ಸ್ ಮಿಚೆಲ್ ಅವರ ಆಹ್ವಾನದ ಮೇರೆಗೆ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು 08 ಮೇ 2021 ರಂದು ಯುರೋಪಿಯನ್ ಕೌನ್ಸಿಲ್ ಸಭೆಯಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಲಿದ್ದಾರೆ. ಭಾರತ–ಯುರೋಪಿನ್ ಯೂನಿಯನ್ ನಾಯಕರ ಸಭೆಯನ್ನು ಪೋರ್ಚುಗಲ್ ಪ್ರಧಾನ ಮಂತ್ರಿ ಶ್ರೀ ಆಂಟೋನಿಯೊ ಕೋಸ್ಟಾ ಆಯೋಜಿಸಿದ್ದಾರೆ. ಪೋರ್ಚುಗಲ್ ಪ್ರಸ್ತುತ ಯುರೋಪಿಯನ್ ಯೂನಿಯನ್ ಕೌನ್ಸಿಲ್‌ನ ಅಧ್ಯಕ್ಷರಾಗಿದ್ದಾರೆ.

2. ಯೂರೋಪಿಯನ್ ಯೂನಿಯನ್ ಎಲ್ಲಾ 27 ಸದಸ್ಯ ರಾಷ್ಟ್ರಗಳ ಮುಖ್ಯಸ್ಥರೊಂದಿಗೆ ಸಭೆಯಲ್ಲಿ ಪ್ರಧಾನ ಮಂತ್ರಿ ಭಾಗವಹಿಸಲಿದ್ದಾರೆ. ಯುರೋಪಿಯನ್ ಯೂನಿಯನ್ +27 ಈ ಸ್ವರೂಪದಲ್ಲಿ ಈ ಮೊದಲು ಒಂದೇ ಬಾರಿ ಈ ವರ್ಷದ ಮಾರ್ಚ್‌ನಲ್ಲಿ ಅಮೆರಿಕಾ ಅಧ್ಯಕ್ಷರೊಂದಿಗೆ ಮಾತ್ರ ಭೇಟಿಯಾಗಿದೆ. ಕೋವಿಡ್ –19 ಸಾಂಕ್ರಾಮಿಕ ರೋಗ ಮತ್ತು ಆರೋಗ್ಯ ಸಹಕಾರ, ಸುಸ್ಥಿರ ಮತ್ತು ಅಂತರ್ಗತ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ; ಭಾರತ-ಯೂರೋಪಿಯನ್ ಯೂನಿಯನ್ ಆರ್ಥಿಕ ಸಹಭಾಗಿತ್ವವನ್ನು ಬಲಪಡಿಸುವುದರ ಜೊತೆಗೆ ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಬಗ್ಗೆ ನಾಯಕರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಿದ್ದಾರೆ.

3. ಭಾರತ– ಯೂರೋಪಿಯನ್ ಯೂನಿಯನ್ ನಾಯಕರ ಸಭೆ ಯೂರೋಪಿಯನ್ ಯೂನಿಯನ್ ಸದಸ್ಯ ರಾಷ್ಟ್ರಗಳ ಎಲ್ಲಾ ನಾಯಕರೊಂದಿಗೆ ಚರ್ಚಿಸಲು ಅಭೂತಪೂರ್ವ ಅವಕಾಶವಾಗಿದೆ. ಇದು ಮಹತ್ವದ ರಾಜಕೀಯ ಮೈಲಿಗಲ್ಲು ಮತ್ತು ಜುಲೈ 2020 ರಲ್ಲಿ ನಡೆದ 15ನೇ ಭಾರತ– ಯೂರೋಪಿಯನ್ ಯೂನಿಯನ್ ಸಭೆಯ ನಂತರ ಸಂಬಂಧಗಳಲ್ಲಿ ಕಂಡುಬರುವ ಆವೇಗವನ್ನು ಆಧರಿಸಿದೆ.

**ನವ ದೆಹಲಿ**
**ಮೇ 06, 2021**

DISCLAIMER: This is an approximate translation. The original is available in English on MEA’s website and may be referred to as the official press release.